22.99 ಲಕ್ಷ 1999-00 ರಲ್ಲಿ 25.45 ಲಕ್ಷ, 2000-01 ರಲ್ಲಿ 31.03 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಬೇರೆ ಬೇರೆ ಕಾರ್ಯಕ್ರಮದಡಿಯಲ್ಲಿ ರಸ್ತೆಗಳು ಆಗುತ್ತಿದ್ದು ಇದನ್ನು ವಿಂಗಡಿಸಿ ಹೇಳಿ ಎಂದು ತಾವು ಕೇಳುತ್ತಿದ್ದೀರಿ. ಆ ಪ್ರಕಾರವಾಗಿ ಕೊಡುವುದಕ್ಕೆ ಸಾಧ್ಯವಿದೆ. ಸಾಕಷ್ಟು ಕೆಲಸ ಜೆಡ್‌ಪಿ ಯಲ್ಲಿ ಆಗಿಲ್ಲವೆಂದು ತಾವು ಪ್ರಶ್ನೆ ಕೇಳುತ್ತಿದ್ದೀರಿ, ನಾನು ಅದನ್ನು ಒಪ್ಪುತ್ತೇನೆ, 138 ಕೋಟಿ ರೂಪಾಯಿ ಕಾರ್ಯಕ್ರಮದಲ್ಲಿ 3200 ಕಿ.ಮೀ. ರಸ್ತೆ ಇಡೀ ರಾಜ್ಯದಲ್ಲಿ ಏನು ಆಗಿದೆ ಅದರಲ್ಲಿ ತಮ್ಮ ಮತ ಕ್ಷೇತ್ರದಲ್ಲಿ 90 ಕಿ.ಮೀ. ರಸ್ತೆ ಮಾತ್ರ ಆಗಿದೆ. ಇದರಿಂದ ಅವರಿಗೆ ಅಸಾಮಾಧಾನವಾಗಿದ್ದರೆ ಅದನ್ನು ಸರಿಪಡಿಸಲಿಕ್ಕೆ ನಾನು ಈಗಾಗಲೇ ಚಿಂತನೆ ಮಾಡಿದ್ದೇನೆ. 30 ಲಕ್ಷ ರೂಪಾಯಿ ಹಣವನ್ನು ತಕ್ಷಣ ಬಿಡುಗಡೆಗೊಳಿಸಲಾಗುವುದು.

ಅಧ್ಯಕ್ಷರು: ನಿಮಗಿರುವ ತೊಂದರೆಯನ್ನು ಸರಿಪಡಿಸಿಕೊಡುತ್ತೇನೆಂದು ಮಾನ್ಯ ಸಚಿವರು ಹೇಳುತ್ತಿದ್ದಾರಲ್ಲ ಪುನಃ ನೀವು ಏಕೆ ಕೇಳುತ್ತೀರಿ?

ಶ್ರೀ ಎ.ಆರ್. ಕೃಷ್ಣಮೂರ್ತಿ: ಜಿಲ್ಲಾ ಪಂಚಾಯಿತಿಯಲ್ಲಿ ಅವೇ ರಸ್ತೆಗೆ ಬಿಲ್ ಮಾಡಿಕೊಂಡು ಓವರ್ ಲ್ಯಾಪ್ ಆಗಿ ಇದರಲ್ಲಿ ದುರುಪಯೋಗವಾಗುತ್ತದೆ. ಆದ್ದರಿಂದ ಇದಾಗಬಾರದು ಎನ್ನುವ ದೃಷ್ಟಿಯಿಂದ ನಾನು ಇಲ್ಲಿ ಕೇಳಬೇಕಾಯಿತು.

Mr. Speaker: On the floor of the House ಇವೆಲ್ಲಾ ಕೇಳಿಸುವುದಕ್ಕಾಗುವುದಿಲ್ಲ. ನನ್ನ ಸಲಹೆ ಏನೆಂದರೆ, ಅವರ ಕೊಠಡಿಗೆ ಹೋಗಿ ಎಲ್ಲಾ ಮಾಹಿತಿಗಳನ್ನು ನೀಡಿ ಸರಿಪಡಿಸಿಕೊಳ್ಳಿ. ಅವರು ಸರಿಪಡಿಸಿಕೊಡುತ್ತೇನೆಂದು ಹೇಳಿದರೂ ಇಲ್ಲಿ ಡಿಸ್‌ಕಸ್ ಮಾಡಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಒಂದೊಂದು ರಸ್ತೆಯ ಬಗ್ಗೆ ಕೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎ.ಆರ್. ಕೃಷ್ಣಮೂರ್ತಿ: ಇಲ್ಲಿ ಕೇಳದೇ ಮತ್ತೆಲ್ಲಿ ಕೇಳಲಿ? ನಾನು ಎಲ್ಲಾ ರಸ್ತೆಗಳ ಬಗ್ಗೆ ಕೇಳದೇ ಕೇವಲ ಅವರು ಕೊಟ್ಟಿರುವ ಅಂಕಿಅಂಶಗಳನ್ನು ಮಾತ್ರ ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು: ಸರಿಪಡಿಸಿಕೊಡುತ್ತೇನೆಂದು ಅವರು ಹೇಳಿದ ಮೇಲೂ ನೀವು ಇಲ್ಲಿ ಎಲ್ಲಾ ಹೇಳುವುದಕ್ಕೆ ಆಗುವುದಿಲ್ಲ, ಆದ್ದರಿಂದ ಅವರ ಕಛೇರಿಗೆ ನೀವು ಹೋಗಿ ಅಲ್ಲಿಗೆ ಇಲಾಖಾ ಕಾರ್ಯದರ್ಶಿಯವರನ್ನು ಕರೆಸುತ್ತಾರೆ, ನಿಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡುತ್ತಾರೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಆಯಿತು ಬಿಡಿ ಸಾರ್ ನಿಮ್ಮ ಮಾತಿನಂತೆ ನಾನು ಅವರ ಬಳಿ ಹೋಗುತ್ತೇನೆ.

ಅಧ್ಯಕ್ಷರು: ಅವರು ಸರಿಪಡಿಸುತ್ತೇನೆಂದು ಹೇಳಿದ ಮೇಲೆ ಇನ್ನೇನು ಇದೆ? ಮುಂದಿನ ಪ್ರಶ್ನೆ ಮಾನ್ಯ ಸೋಮಶೇಖರ್‌ರವರು ಕೇಳಿ.

ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ (ಅರ್ಧ ಪಾಸ್ಡ್‌ಗಳ) ಪರೀಕ್ಷೆ

159(1673) ಶ್ರೀ ಬಿ. ಸೋಮಶೇಖರ್ (ಮುಳಬಾಗಿಲು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ (ಅರ್ಧ ವಾರ್ಷಿಕ) ಪರೀಕ್ಷೆಯನ್ನು ಸೆಪ್ಟೆಂಬರ್-ಅಕ್ಟೋಬರ್ ತಿಂಗಳ ಬದಲಾಗಿ 1988ರಲ್ಲಿ ವರ್ಷದ ಜೂನ್ ತಿಂಗಳಿಗೆ ಹಿಂದೂಡಿ ಒಂದು ವರ್ಷ ಹಾಳಾಗದಂತೆ ಪರೀಕ್ಷೆ ನಡೆಸಿರುವುದು ನಿಜವೆ, ಹಾಗಿದ್ದಲ್ಲಿ ಈ ಪರೀಕ್ಷೆಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು, ಮಾನ್ಯ ಮಂತ್ರಿಗಳು ಇದನ್ನು ಈ ವರ್ಷ ಜಾರಿಗೊಳಿಸುವುದಾಗಿ ಹೇಳಿರುವುದು ನಿಜವೇ, ಹಾಗಿದ್ದಲ್ಲಿ ಯಾವಾಗ ಜಾರಿಗೊಳಿಸಲಾಗುವುದು, ಆದೇಶವನ್ನು ಯಾವಾಗ ಹೊರಡಿಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ನಿಜ. ಈ ಪರೀಕ್ಷೆಯಲ್ಲಿ 26,313 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. 2001-2002ನೇ ಸಾಲಿನಿಂದ ಪ್ರತಿ ವರ್ಷ ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ ಪರೀಕ್ಷೆಯನ್ನು ಅಕ್ಟೋಬರ್ ತಿಂಗಳ ಬದಲಿಗೆ ಜೂನ್ ತಿಂಗಳಿನಲ್ಲಿ ನಡೆಸಲು ನಿರ್ಧಾರ ಕೈಗೊಳ್ಳಲಾಗಿದ್ದು, ಈ ಬಗ್ಗೆ ಆದೇಶಗಳನ್ನು ಹೊರಡಿಸಲಾಗುತ್ತಿದೆ.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಯಾರು ಸಪ್ಲಿಮೆಂಟರಿ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದರು ಅವರಿಗೆ ಒಂದು ವರ್ಷ ಹಾಳಾಗುತ್ತಿತ್ತು, ನಾನು ಹಿಂದೆ ಶಿಕ್ಷಣ ಸಚಿವನಾಗಿದ್ದಾಗ ಆ ಯೋಜನೆ ತಂದು ಪ್ರಾಯೋಗಿಕವಾಗಿ ನಡೆಸಿ ಸುಮಾರು 26 ಸಾವಿರ ವಿದ್ಯಾರ್ಥಿಗಳು ಒಂದೇ ಸಾರಿ ಪಾಸಾಗಿ ಅದೇ ವರ್ಷ ಕಾಲೇಜಿಗೆ ಹೋದರು. ನಮ್ಮ ಸರ್ಕಾರದ ಮಂತ್ರಿಯೊಬ್ಬರು ನಾನು ರಾಜೀನಾಮೆ ಕೊಟ್ಟ ಒಂದು ವಾರದ ನಂತರ ಅದನ್ನು ಕಿತ್ತು ಹಾಕಿದರು. ಸಾರ್ವಜನಿಕವಾಗಿ ಒಳ್ಳೆಯದಾಗತಕ್ಕ ಕೆಲಸ ಯಾವುದೇ ಸರ್ಕಾರ ಮಾಡಿದರೂ ಕೂಡ ನಾನು ಅವರನ್ನು ಅಭಿನಂದಿಸುತ್ತೇನೆ. ಸುಮಾರು 12 ವರ್ಷಗಳಾದ ಮೇಲೆ ಇವರು ಪುನಃ ಆ ಯೋಜನೆಯನ್ನು ಜಾರಿಗೆ ತರುತ್ತಿರುವುದರಿಂದ ನನಗೆ ವೈಯಕ್ತಿಕವಾಗಿ ಬಹಳ ಸಂತೋಷವಾಗುತ್ತಿರುವುದರಿಂದ ನಾನು ಅವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಇದರಿಂದಾಗಿ ಅನೇಕ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

11.40 ಎ.ಎಂ

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಅಧ್ಯಕ್ಷರೆ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫೇಲ್ ಆದಂಥ ವಿದ್ಯಾರ್ಥಿಗಳಿಗೋಸ್ಕರ ಜೂನ್ ತಿಂಗಳಲ್ಲಿ ಸಪ್ಲಿಮೆಂಟರಿ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಅದೇ ರೀತಿ ಪಿ.ಯು.ಸಿ. ಗೂ ಸಹ ಜೂನ್ ತಿಂಗಳಲ್ಲಿ ಸಪ್ಲಿಮೆಂಟರಿ ಪರೀಕ್ಷೆಯನ್ನು ನಡೆಸಿದರೆ ಒಳ್ಳೆಯದು. ಈಗಾಗಲೇ ಆಂಧ್ರಪ್ರದೇಶ ಮತ್ತು ಇತರೇ ರಾಜ್ಯಗಳಲ್ಲಿ, ಈ ಪದ್ಧತಿ ಇದೆ. ಯಾರು ಭಾಷಾ ವಿಷಯದಲ್ಲಿ ಫೇಲ್ ಆಗುತ್ತಾರೆಯೋ ಅಂಥವರಿಗೆ ಮತ್ತೆ ಅನುಕೂಲತೆ ಮಾಡಿಕೊಟ್ಟು, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಹಾಗೂ ಇತರೇ ಪ್ರೊಫೆಶನಲ್ ಕೋರ್ಸ್‌ಗಳಿಗೆ ಸೇರುವುದಕ್ಕೆ ಅನುಕೂಲತೆ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಇಲ್ಲಿಯೂ ಸಹ ಪಿ.ಯು.ಸಿ. ವಿದ್ಯಾರ್ಥಿಗಳಿಗೋಸ್ಕರ ಜೂನ್ ತಿಂಗಳಲ್ಲಿ ಸಪ್ಲಿಮೆಂಟರಿ ಪರೀಕ್ಷೆಯನ್ನು ನಡೆಸುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ವಯೋಮಿತಿಯನ್ನು 15 ವರ್ಷಕ್ಕೆ ಈಗಾಗಲೇ ಇಳಿಸಲಾಗಿದೆ. ಆದರೆ, ಪಿ.ಯು.ಸಿ. ಪರೀಕ್ಷೆ ತೆಗೆದುಕೊಳ್ಳಲು 18 ವರ್ಷ ಮಾಡಿರತಕ್ಕಂಥದ್ದು ಸರ್ಕಾರದ ಮತ್ತೊಂದು ಧೋರಣೆಯಾಗಿದೆ. ಇವತ್ತಿನ ದಿವಸ ಎಸ್.ಎಸ್.ಎಲ್.ಸಿ. ಗೆ 15 ವರ್ಷ ಮತ್ತು ಪಿ.ಯು.ಸಿ.ಗೆ 18 ವರ್ಷ ಮಾಡಿರುವುದರಿಂದ, ಒಂದು ವರ್ಷದವರೆಗೆ ವಿದ್ಯಾರ್ಥಿಗಳು ಮನೆಯಲ್ಲಿಯೇ ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ, ಪಿ.ಯು.ಸಿ. ಪರೀಕ್ಷೆ ತೆಗೆದುಕೊಳ್ಳಲು ನಿಗದಿ ಮಾಡಿರತಕ್ಕಂಥ 18 ವರ್ಷದ ಅವಧಿಯನ್ನು ಒಂದು ವರ್ಷ ಕಡಿಮೆ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡುವುದಕ್ಕೆ ತಯಾರಿದೆಯೇ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಲವಾರು ಜನ ವಿದ್ಯಾರ್ಥಿಗಳು ಅದರಲ್ಲಿಯೂ ಕೂಡ ವಿಶೇಷವಾಗಿ ಗ್ರಾಮೀಣ ಪ್ರದೇಶದ ಮಕ್ಕಳು ಕೇವಲ 5 ಮಾರ್ಕ್ಸ್ ಅಥವಾ ಒಂದು ವಿಷಯದಲ್ಲಿ ಫೇಲ್ ಆಗುತ್ತಿದ್ದಾರೆ. ಇದರಿಂದ ಇಡೀ ವರ್ಷ ಬವಣೆ ಪಡತಕ್ಕಂಥ ಪರಿಸ್ಥಿತಿ ಇತ್ತು. 1988ನೇ ಇಸವಿಯಲ್ಲಿ ಇದ್ದಂಥ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿದ್ದಂಥ ಸನ್ಮಾನ್ಯ ಸೋಮಶೇಖರ್‌ರವರು ಈ ಯೋಜನೆಯನ್ನು ಪ್ರಾರಂಭ ಮಾಡಿದ್ದರು. ಮಾನ್ಯ ಸೋಮಶೇಖರ್‌ರವರು ಈಗಾಗಲೇ ಹೇಳಿದ ಹಾಗೆ ಇವರು ತಂದಂಥ ಯೋಜನೆಯನ್ನು ಇವರ ಸರ್ಕಾರ ಇದ್ದಂಥ ಸಂದರ್ಭದಲ್ಲಿಯೇ ಕಿತ್ತು ಹಾಕಲಾಯಿತು. ಆದರೆ, ನಮ್ಮ ಸರ್ಕಾರ ಬಂದ ಮೇಲೆ ಹಿಂದಿನ ಸರ್ಕಾರ ಏನೇನು ಒಳ್ಳೆಯ ಕೆಲಸಗಳನ್ನು ಮಾಡಿತ್ತೋ, ಅದನ್ನು ಮುಂದುವರಿಸಿಕೊಂಡು ಹೋಗತಕ್ಕಂಥ ಒಂದು ಪದ್ಧತಿಯನ್ನು ನಮ್ಮ ಶಿಕ್ಷಣ ಇಲಾಖೆಯಲ್ಲಿ ಮಾಡಲಾಗಿದೆ. ಆದ್ದರಿಂದ, ಈ ಪದ್ಧತಿಯನ್ನು ಕಳೆದ ವರ್ಷ ಆರಂಭ ಮಾಡಿ ಸುಮಾರು 62 ಸಾವಿರ ಜನ ವಿದ್ಯಾರ್ಥಿಗಳು ಮತ್ತೆ ಉತ್ತೀರ್ಣರಾಗಿ ಪಿ.ಯು.ಸಿ. ವಿದ್ಯಾಭ್ಯಾಸಕ್ಕೆ ಸೇರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದನ್ನು ಹೊಸದಾಗಿ ಮತ್ತು ಹೆಚ್ಚು ಆಕರ್ಷಕವಾಗಿ, ಸಮರ್ಥವಾಗಿ ಮಾಡತಕ್ಕಂಥ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಇದರ ಜೊತೆಗೆ ಪಿ.ಯು.ಸಿ. ಯಲ್ಲಿಯೂ ಕೂಡ ಇದೇ ರೀತಿಯ ಪರೀಕ್ಷೆಯನ್ನು ನಡೆಸಬೇಕೆಂದು ಸನ್ಮಾನ್ಯ ಯಾವಗಲ್‌ರವರು ಸಲಹೆಯನ್ನು ಕೊಟ್ಟಿದ್ದಾರೆ. ಹಾಗೆಯೇ ಪಿ.ಯು.ಸಿ. ಪರೀಕ್ಷೆ ತೆಗೆದುಕೊಳ್ಳಲಿಕ್ಕೆ ಈಗ ಇರತಕ್ಕಂಥ 18 ವರ್ಷ ವಯಸ್ಸಿನ ಮಿತಿಯನ್ನು ಕಡಿಮೆಗೊಳಿಸಬೇಕೆಂದು ಸನ್ಮಾನ್ಯ ಸದಾನಂದಗೌಡರು ಸಲಹೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ನೀಡಿರತಕ್ಕಂಥ ಸಲಹೆಗಳನ್ನು ಅಳವಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗ ತಡೆಗಟ್ಟುವಿಕೆ

26(30) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?